ಒಂದಾಣೆ ಮಾಲೆ 102

ಈ ಯುಗದ ಠೇಂಕಾರ

ಕುಮಾರ

(ವಿನೋದ ಕಥೆ)



ಲೇಖಕ: ಕುಡ್ಪಿ ವಾಸುದೇವ ಶೆಣೈ.

ಬೆಲೆ: ಒಂದಾಣೆ.

ಒಂದಾಣೆ ಮಾಲೆ— ಮಂಗಳೂರು.

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

೧*ಕೆಪ್ಪಟೆರಾಯ; ೨ ನಾರೀಶ್ವರರು(ದ್ವಿ. ಮುದ್ರಣ); ೩ ಕಳ್ಳನಿಗೆ ಸಂಭಾವನೆ(ದ್ವಿ. ಮುದ್ರಣ) ೪ *ಸದ್ರಿಸುಬ್ಬ; ೫ ಅದ್ಭುತ ತ್ಯಾಗ (ದ್ವಿ. ಮುದ್ರಣ); ೬ *ಚುನಾವಣೆ ಅರ್ಥಾತ್ ಬನಾವಣೆ; ೭*ಬೀಡಿ ಸೇದಬೇಡಿ ಮತ್ತು ಆ ಮಗು; ೮*ಇಂಗ್ಲಿಷ್–ಕನ್ನಡ ಅರ್ಥಕೋಶ; ೯ ಲಂಚಕ್ಕೆ ಸಂಚಕಾರ(ದ್ವಿ. ಮುದ್ರಣ); ೧೦ *ಟಿಶ್ಯೂ ಔಷಧಿಗಳ ಕೈಪಿಡಿ; ೧೧ *ಶ್ರೀಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ); ೧೨ ಜೀವದ ಮೌಲ್ಯ ಮತ್ತು ಇತರ ಕಥೆಗಳು; ೧೩ ಸತ್ತವನ ಸೇಡು ಮತ್ತು ಇತರ ಕಥೆಗಳು; ೧೪ *ವೆಂಕಟನ ಸಂಕಟ; ೧೫ ಬಾಬಿಗೆ ಬಾಸಿಂಗ (ದ್ವಿ. ಮುದ್ರಣ); ೧೬ ವೇಣೂರಿನ ಗತವೈಭವ(ದ್ವಿ. ಮುದ್ರಣ); ೧೭ ಒಗಟುಗಳು (ದ್ವಿ. ಮುದ್ರಣ); ೧೮ ಜಗಳಗಂಟಿ ಮತ್ತು ಇತರ ಕಥೆಗಳು; ೧೯ ರಥೋತ್ಸವ; ೨೦ ಕರಿನಾಯಿ ಮತ್ತು ಮುಪ್ಪು; ೨೧ ಭಾರತದ ಮಹಾನಗರ–I(ದ್ವಿ. ಮುದ್ರಣ); ೨೨ ತಿರುಕ್ಕುರಲ್(ದ್ವಿ. ಮುದ್ರಣ); ೨೩ ಸೂರ್ಯನ ಸಂಸಾರ; ೨೪ ಭಾರತದ ಮಹಾನಗರ–II (ದ್ವಿ. ಮುದ್ರಣ); ೨೫ ಧೈರ್ಯ ಮತ್ತು ಇತರ ಸತ್ಯ ಕಥೆಗಳು; ೨೬ ಮಾರಾವತಾರ(ದ್ವಿ. ಮುದ್ರಣ); ೨೭ ಹಾಸವಿಲಾಸ; ೨೮ ಸತ್ಯವಂತ ಬಾಬಿ [ದ್ವಿ. ಮುದ್ರಣ]; ೨೯ ಜಾಣ್ಮೆಯ ಒಗಟುಗಳು ೩೦ ಜಾತಕ ಕಥೆಗಳು; ೩೧ ಕಾರ್ಕಳದ ಚರಿತ್ರೆ; ೩೨ ಮರ್ಜಿ; ೩೩ ದರ್ಶನದ ಕಥೆಗಳು; ೩೪ ಅಳುವಿನ ಹೊಳೆ ಮತ್ತು ಕೇಶವಭೂಪ; ೩೫ ಶರಾಬಿನ ಪೀಪಾಯಿಗಳು; ೩೬ ಉಪದೇಶ ಶತಕ; ೩೭ ನಿಮಗೆ ಗೊತ್ತಿದೆಯೇ?; ೩೮ ಚತುರ ಚಮತ್ಕಾರ; ೩೯ ಸತೀ ಸಾವಿತ್ರಿ (ದ್ವಿ. ಮುದ್ರಣ); ೪೦ ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು; ೪೧ ಭಾರತದ ಮಂತ್ರಿಮಂಡಲಗಳು(ದ್ವಿ. ಮುದ್ರಣ); ೪೨ ಕಾಲುಬಳೆಯ ಕಥೆ; ೪೩ ಭಾರತದ ನಾಲ್ಕು ಕಲಶಗಳು; ೪೪ ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು; ೪೫ ಸುಭಾಷಿತ; ೪೬ ೧೮೫೭ರ ಸಿಪಾಯಿದಂಗೆ; ೪೭ ಅಕಾಂಡ ತಾಂಡವ; ೪೮ ಸಾಹಸದ ಕಥೆಗಳು; ೪೯ ಸಂಜ್ಞಾಜ್ಞಾನಕೋಶ; ೫೦ ಪಂಡಿತನ ಪಿಟೀಲು; ೫೧ ಭೋಗಯಾತ್ರೆ; ೫೨ ಸಂಗ್ರಾಮಸಿಂಹ; ೫೩ ಧರ್ಮಶಿಕ್ಷಾ; ೫೪ ಮಹಾತ್ಮ; ೫೫ ಮೀರಾಬಾಯಿ; ೫೬ ವೀರರಮಣಿ ಕರ್ಮದೇವಿ; ೫೭ ಅರಳಿದ ನಗು; ೫೮ ಸಚಿತ್ರ ಜಪಾನ್; ೫೯ ಚುಟ್ಟಬಿಟ್ಟಧಿಟ್ಟ; ೬೦ ನಿರಪರಾಧಿ; ೬೧ ಭಕ್ತವಾಣಿ; ೬೨ ಜಾನಪದ ಸಾಹಿತ್ಯ; ೬೩ ಡಾಕ್ಟರ್ ಆರೋಗ್ಯಪರ್; ೬೪ ಲೌಕಿಕ ನ್ಯಾಯಗಳು; ೬೫ ಶಿಶುಪಾಲ ಮಾನಭಂಗ; ೬೬ ಜರಾಸಂಧ ವಧೆ; ೬೭ ಜವಾಹರಲಾಲ (ದ್ವಿ. ಮುದ್ರಣ); ೬೮ ಕರುಣೆ ಮತ್ತು ಇತರ ಕಥೆಗಳು; ೬೯ ಶ್ರೀಕ್ಷೇತ್ರ ಉಡುಪಿ; ೭೦ ವಿನೋದ ವಿಹಾರ; ೭೧ ಭಾರತದ ಗತವೈಭವ; ೭೨ ಸತ್ಯ ಹರಿಶ್ಚಂದ್ರ; ೭೩ ಸೂಕ್ತಿಗಳು; ೭೪ ಉ.ಕ.ದ ಯಕ್ಷಗಾನ ಕಲಾವಿದರು; ೭೫ ದೇವರ ಸಾಮ್ರಾಜ್ಯದಲ್ಲಿ...; ೭೬ ಕ್ರಾಂತಿಕಂಠೀರವ ಭಗತ್ ಸಿಂಘ್; ೭೭ ಜಾತಕಪಠನ ಮತ್ತು ಇತರ ಕಥೆಗಳು; ೭೮ ಅಮೃತವಾಣಿ; ೭೯ ಮಾಯಾಮೃಗ; ೮೦ ಡಾಕ್ಟರ್ ಗಾಂಧೀಜಿ; ೮೧ ಆದಿಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ; ೮೨ ಆದಿಶ್ರೀ ಶಂಕರಾಚಾರ್ಯ ವಿರಚಿತ ಸ್ತೋತ್ರಗಳು (ಅರ್ಥ ಸಹಿತ); ೮೩ ಬೆಡಗಿನ ನಾಡು ಕೊಡಗು; ೮೪ ಆಮೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು; ೮೫ ಮಂಗಳೂರಿಂದ ಮಧುರೆಗೆ; ೮೬ ಸತೀ ವೃಂದಾ; ೮೭ ಗೌತಮನ ಗೃಹತ್ಯಾಗ; ೮೮ ಗೃಹವೈದ್ಯ; ೮೯ ನಮ್ಮ ನಾಟಕಗಳು; ೯೦ ಜಾನಪದ ಕಥೆಗಳು; ೯೧ ಕೆಲವು ಉಪಯುಕ್ತ ಸಲಹೆಗಳು. ೯೨ ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ. ೯೩ ಹೋಮಿಯೋಪಥಿ-ಚಿಕಿತ್ಸಾಸಾರ. ೯೪ ಯಕ್ಷಗಾನ ನಾಟಕದ ಪರಂಪರೆ; ೯೫ ಪುನರುಜ್ಜೀವನ (ಏಕಾಂಕ ನಾಟಕ); ೯೬ ಪ್ರಥಮ ಚಿಕಿತ್ಸೆಯ ಕೈಪಿಡಿ; ೯೭ ಹಸ್ತರೇಖಾ ವಿಜ್ಞಾನ; ೯೮ ಸ್ವಾತಂತ್ರ್ಯ; ೯೯ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ; ೧೦೦ ಭಕ್ತ ಕುಚೇಲ; ೧೦೧ ಉತ್ತರನ ಪೌರುಷ; ೧೦೨ ಕುಮಾರ.

*ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು–೧.

ಈ ಯುಗದ ಠೇಂಕಾರ

ಕುಮಾರ

ನಾನು ಪತ್ರಿಕೆಗಳನ್ನು ತೆರೆದು, ತುಲನೆ ಮಾಡುತಿದ್ದೆ. "ಎಟಂ ಶಕ್ತಿಯು ಸುಟ್ಟು ಹಾಕಿದ ಜೀವಗಳು" ಎಂದು ಒಂದು ಪತ್ರಿಕೆ ಬೆದರಿಕೆ ಹಾಕಿತ್ತು. "ಅಳಿಸಿದ್ದಕ್ಕಿಂತ ಉಳಿಸಿದ ಅಥವಾ ಉಳಿಯುವ ಪ್ರಾಣಗಳು ಅಧಿಕ" ಎಂದು ಇನ್ನೊಂದು ಪತ್ರಿಕೆಯು, ಉರಿಗಾಯಕ್ಕೆ ಮುಲಾಮು ಹಚ್ಚಿತ್ತು. ಸದ್ದಿಲ್ಲದೆ, ಕೀಣು (ನನ್ನ ಗೆಳೆಯ) ಜಗಲಿಯ ಮೇಲೇರಿ ಬಂದು ನಿಂತನು. ನೋಡಿ ತಿಳಿವ ಮೊದಲು ಮೈದೆಗೆದು, ತಿಳಿದನಂತರ ಕಂಪಿಸಿ, ಆ ಮೇಲೆ ಚೆನ್ನಾಗಿ ನೋಡಿದೆ. ಕೀಣುವಿನ ಮೋರೆಯು, ಕೆಲದಿನಗಳ ಹಿಂದೆ ಇದ್ದುದಕ್ಕಿಂತ ಸುಮಾರು ಮೂರುವರೆ ಅಂಗುಲ ಉದ್ದ ಬೆಳೆದಂತೆ ಕಂಡಿತು.

"ಕೀಣೂ! ನನ್ನ ಸ್ವಂತ ಕಣ್ಣುಗಳು ನನ್ನನ್ನು ವಂಚಿಸುತ್ತಿವೆಯಾದರೆ, ನೀನು ನನ್ನನ್ನು ತಿದ್ದಬೇಕೆಂದು ವಿನಂತಿಸುತ್ತೇನೆ—ವಿಶೇಷವೇನೂ ಇಲ್ಲ—ನಿನ್ನ ಮುಖವು ಕೆಲವಂಗುಲ ಲಂಬಿಸಿದೆ! ಲಂಬಿಸಿದುದು ನಿಜವಾದರೆ, ಕಾರಣ ತಿಳಿಸಿದರೆ, ನಾನೇ ನಿನ್ನನ್ನು ತಿದ್ದಲೂ ಸಾಧ್ಯವಿದೆ!" ಎಂದೆ.

"ಮನುಷ್ಯನಿಗೆ, ನೊರೆಕಾಯಿಯಷ್ಟು ಚಿಕ್ಕ ಅಥವಾ ಸೋರೆಕಾಯಿಯಷ್ಟು ದೊಡ್ಡ ಮೋರೆಯಿದೆ. ಬೇರೆ ಆಕಾರ ಬಲು ಕಡಮೆ. ಇಡೀ ಜಗತ್ತು ಅಸಮತ್ವ ಅಥವಾ ವೈಷಮ್ಯದಿಂದ ತುಂಬಿದೆ!"—ಎನ್ನುತ್ತ, ದೀರ್ಘ ಶ್ವಾಸಬಿಟ್ಟು, ಒಂದು ಕುರ್ಚಿ ಎಳೆದು, ಅರ್ಧ ಮೂರ್ಛಾವಸ್ಥೆಯಲ್ಲಿ ಬಿದ್ದುಕೊಂಡನು.

"ಕೀಣೂ! ನಿನ್ನ ವರ್ತಮಾನಸ್ಥಿತಿಗೆ ಈ ಎರಡರಲ್ಲೊಂದು ಕಾರಣ ನಿಜವಿರಬೇಕು; (೧) ನೀನು ಕಳೆದ ರವಿವಾರ, ಸುಖವಾಗಿ ತಿಂದುಂಡು ಬೆಳೆದಿರುವ ಇಬ್ಬರು ಪ್ರಯಾಣಿಕರ ನಡುವೆ ಸಿಟಿಬಸ್ಸಿನಲ್ಲಿ ಕುಳಿತು

ಎಲ್ಲಿಗೋ ಹೋಗುತ್ತಿದ್ದಾಗ ನಿನ್ನ ಮೋರೆಯು ಎಡೆಯಲ್ಲಿ ಸಿಲುಕಿ ಈ ಆಕಾರ ಬಂದಿರಬೇಕು. (೨) ಹಣದ ಅಡಚಣೆಯು ಯೋಜನೆಯಿಂದ ದಿಕ್ಕು ತೋರದೆ ಮೈದಾನು ಕಡೆಗೆ ತಲಪಿ, ಅಲ್ಲಿಯ ಬೇಕಾಯಿದೆಶೀರ ಡೊಂಬರಾಟವನ್ನು ಇಣಿಕಿ ನೋಡಿ ಮನೆಗೆ ಮರಳುವಾಗ ಕುತ್ತಿಗೆಯೂ ಮೋರೆಯೂ ಸ್ಥಿತಿಸ್ಥಾಪಕತೆ ಕಳೆದುಕೊಂಡು, ಉದ್ದವಾಗಿಯೇ ಉಳಿದುಕೊಂಡುವು. ಎರಡರಲ್ಲಿ ಯಾವುದು?"

"ಎರಡೂ ಅಲ್ಲ."

"ಹಾಗಾದರೆ,"—ನಿಶ್ಚಿಂತನಾಗಿ ನಾನು ಹೇಳಿದೆ—"ಒಂದು ವಿಷಯದಲ್ಲಿ ನಿನ್ನ ಅಭಿಪ್ರಾಯವನ್ನು ಹೇಳು. ಎಟಂ ಯುಗದಲ್ಲಿ ಜಗತ್ತಿಗೆ ಶಾಂತಿಸಿಗುವ ಆಸೆಯಿದೆಯೇ?"

ಕೇಣುವಿನ ಮಿದುಳು, ಅತಿ ಕೀಳು ತರಗತಿಯದಲ್ಲವೆಂದು ನಾನು ಈ ಮೊದಲೇ ಅನೇಕ ಬಾರಿ ಹೇಳಿರುತ್ತೇನೆ. ನನ್ನ ಮಹಾ ಸ್ನೇಹಿತರಲ್ಲಿ ಶಿಬ್ಬು ಮತ್ತು ಕೇಣು—ಇವರಿಬ್ಬರು ಎರಡು ರತ್ನಗಳು. ಇವೆರಡರಲ್ಲಿ ಕೇಣು ಅಮೌಲ್ಯ ರತ್ನ. ರಾಜಕೀಯ ಘಟನೆಗಳಲ್ಲಿ ಶಿಬ್ಬುವಿನ ಭವಿಷ್ಯವು ಸೇಕಡಾ ಮೂರಕ್ಕೆ ಸಮೀಪವಾಗುತ್ತಿತ್ತಾದರೆ ಕೇಣುವಿನ ಸಂಖ್ಯೆ ಸೇಕಡಾ ಹದಿನೈದರಷ್ಟು ಸತ್ಯವಾದ ಉದಾಹರಣೆಗಳಿದ್ದುವು. ಚುನಾವಣಾ ಫಲಿತಾಂಶಗಳ ಭವಿಷ್ಯದಲ್ಲಂತೂ, ಕಳೆದ ನಗರಸಭಾ ಚುನಾವಣಾ ಕಾಲದಲ್ಲಿ ಸೇಕಡಾ ೧೮||| ಸತ್ಯವಾಗಿ ರುಜುಪಡಿಸಿ, ನನ್ನ ಎಣಿಕೆಯಲ್ಲಿ ಒಮ್ಮಿಂದೊಮ್ಮೆ ಅತ್ಯುನ್ನತ ಸ್ಥಾನಕ್ಕೆ ನೆಗೆದು ಕುಳಿತಿದ್ದನು. ಆದಕಾರಣ, ಈಗಲಾದರೂ ಎಟಂಶಕ್ತಿ ಸಂಗ್ರಹದ ಕಾರಣದಿಂದ ಧರಣಿ ಉಳಿವುದೋ ಎಂಬುದು ಈ ಮಹಾಶಯನ ಅಭಿಪ್ರಾಯದ ಮೇಲೆ ಹೊಂದಿಕೊಂಡಿತ್ತೆಂದು ನನ್ನ ಭರವಸೆ.

ಕಣ್ಣುಗಳನ್ನು ಮುಚ್ಚಿ, ಕೇಣು ಎಂಬ ಮೇಧಾವಿಯು ಪ್ರಾಣೋತ್ಕ್ರಮಣ ಮಾಡುವ ಮಾರ್ಜಾಲದಂತೆ ಅತಿಕ್ಷೀಣ ಸ್ವರದಲ್ಲೊಂದು ಆರ್ತನಾದ ಮಾಡಿ, ಆಮೇಲೆ ಆಕಸ್ಮಿಕವಾಗಿ ಮನೋನಿರ್ಧಾರಮಾಡಿ ಅದ್ಭುತತರವಾಗಿ ನೇರಾಗಿ ಕುಳಿತು, "ಜಗತ್ತು ಎಟಂ ಪ್ರಯೋಗದಿಂದ ಉಳಿಯುವುದು; ಆದರೆ, ಅದರಿಂದುಳಿದವರನ್ನು ಆಗಾಗ್ಗೆ ಮುಕ್ಕಳು ಕೊಲ್ಲುವುವು!" ಎಂದನು.

"ಮಕ್ಕಳು?"

"ಮಕ್ಕಳು!"

"ಏಕೆ ಮಕ್ಕಳು?"

"ಏಕೆ ಮಕ್ಕಳೆಂದು ಯಾರಿಗೂ ತಿಳಿದಿಲ್ಲ. ಜಗತ್ತಿನಲ್ಲಿ ಅದೊಂದು ಗೂಢವಾಗಿಯೇ ಉಳಿದಿದೆ. ಆದರೂ, ಜಗತ್ತು ಮಕ್ಕಳು ಮಕ್ಕಳು ಎಂದು ಕೂಗುತ್ತಿದೆ!"

"ಪ್ಶ್! ಏನಿದು ಕೀಣು?"

"ಕೇಳು!"—ಎಂದನು ಕೀಣು. ಮತ್ತು ಜಗತ್ತು ಈ ವರೆಗೆ ತಿಳಿದಿರದಂಥ ಶಾಶ್ವತ ಅಶಾಂತಿಯ ಒಂದು ಉದಾಹರಣೆಯನ್ನು ನನ್ನ ಮುಂದೆ ಅನಾವರಣಗೊಳಿಸಿದನು. ಅವನ ಮಾತುಗಳಲ್ಲೆ ಆ ವರದಿಯನ್ನು ಇಲ್ಲಿ ದಾಖಲುಮಾಡಲಾಗಿದೆ.

o o o o o o o

"ಅಳಿದುಳಿದ ಗೆಳೆಯಾ!"—ಕೀಣು, ಆರಂಭಿಸಿದನು: "ಈ ಕೀಣು ಎಂಬ ಮನುಷ್ಯನು, ಹಲವು ವರ್ಷಗಳ ಹಿಂದೆ, ಪಾತಿಯೆಂಬವಳ ಮೋತಿ ಎಂಬ ಪ್ರೀತಿಯ ಕೋತಿಯ ಮರಣಾನಂತರ—ಜಗತ್ತಿನ ಮೇಲೆ ವೈರಾಗ್ಯ ತಾಳಿ ಮದುವೆಯಾಗಲಿಲ್ಲ, ಇನ್ನು ಆಗುವ ಆಸೆಯೂ ಇಲ್ಲ. ಬಲಂ ಬ್ರಹ್ಮ ತೇಜೋಬಲಂ. ಆದರೆ, ನನಗೆ ಮಕ್ಕಳು ಮರಿಗಳಿಲ್ಲವೆಂಬ ಒಂದೇ ಕಾರಣದಿಂದ ಕಲ್ಲೆದೆಯವನಾಗಿರಬಾರದೆಂದು ನಿರ್ಧರಿಸಿ, ಎಲ್ಲ್ಯಾದರೂ ಚಿಕ್ಕ ಮಕ್ಕಳನ್ನು ಕಂಡರೆ ಗಲ್ಲ ತಟ್ಟುತಿದ್ದೆ. ನನ್ನ ಕಿಸೆಯಲ್ಲಿ ಶಿಲ್ಕು ಹಣ ಉಳಿದರೆ ಪೆಪ್ಪರ್ ಮಿಠಾಯಿ ಕೊಂಡುಕೊಂಡು, ನಮ್ಮ ನೆರೆಕರೆಯ ಶೀತಯ್ಯನವರ ಮಗುವಿಗೆ ಕೊಟ್ಟುದುಂಟು, ಆ ಮಗು ಆ ಪೆ| ಮಿ| ಚೀಪುತ್ತ, ಕೆಂಪು ಪಾಕದ ಕೈಯಿಂದ ನನ್ನ ವೇಷ್ಟಿಯನ್ನು ಹಿಡಿದೆಳೆದು ಪುನಃ 'ಮೈ ಭೂಕಾ ಹೂಂ' ಎಂದುದುಂಟು. ಇಲ್ಲವೆನ್ನಲು ಹೃದಯವಿಲ್ಲದೆ, ಸಾಲಮಾಡಿಯಾದರೂ ಪುನಃ ಆ ಮಿಠಾಯಿಯನ್ನು ತಂದುಕೊಟ್ಟು, ಅಳಿದುಳಿದ ಧೋತಿಯ ಅಂಶವನ್ನು ಸಕ್ಕರೆ ಪಾಕದಿಂದ ರಕ್ಷಿಸಲು ದೂರಸಿಡಿದು ಓಡಿದ್ದುಂಟು. ಆದರೆ, ಕಳೆದ ತಿಂಗಳಲ್ಲೊಂದು ದಿನ, ಮಕ್ಕಳ ಮೇಲಿನ ನನ್ನ ಅಕ್ಕರೆಯು ಮಿಕ್ಕಿ, ಉಕ್ಕಿ (ಇಲ್ಲಿ, ಕೀಣು, ಒಮ್ಮಿಂದೊಮ್ಮೆ ನಡುಗಿದನು)—ನಾನು

ಕೆಲಸಿಯಾಗಿ ರಜಿಸ್ಟರ್ ಹೊಂದುವ ಆಪತ್ತಿನಿಂದ ಒಂದೇ ಅಂಗುಲ ಅಂತರದಿಂದ ಪಾರಾದೆನು. ಮಿತ್ರ, ಸುಖಜೀವನಕ್ಕೆ ಅಥವಾ ದೀರ್ಘಾಯುಷ್ಯಕ್ಕೆ ದಾರಿಯೇನು ಎಂದು ಯಾರಾದರೂ ಕೇಳಿದರೆ, ಜಗತ್ತಿಗೆ ನನ್ನದೊಂದೇ ಸಂದೇಶ—"ನಿಮ್ಮ ಅಥವಾ ಇತರರ ಮಕ್ಕಳನ್ನು ಸೆಲೂನಿಗೆ ಒಯ್ಯಬೇಡಿ!" ಅಂತ.

ನಮ್ಮ ಶೀತಯ್ಯನ ಮಗುವನ್ನು ನೀವು ಕೂಡ ಆಗಾಗ್ಗೆ ನೋಡಿದ್ದಿರಬಹುದು. ಜಗತ್ತಿನ ಮನುಷ್ಯರೂಪೀ ಸೂಕರ ಎಲ್ಲಿದೆಯೆಂಬ ಸ್ಪರ್ಧೆಯು ಯಾವುದಾದರೂ ಪತ್ರಿಕೆಗಳಲ್ಲಿ ಪ್ರಕಟವಾದರೆ, ಈ ಮಗುವನ್ನು ತೋರಿಸಿಕೊಟ್ಟು ನೀನು ಪ್ರಥಮ ಬಹುಮಾನ ಪಡೆವುದರಲ್ಲಿ ಅನುಮಾನವಿಲ್ಲ; ಹಾಗೆ ಪಡೆದಾಗ ನಾನು (ಇಲ್ಲಿ ಕೀಣು ಪುನಃ ಕಂಪಿಸಿದನು) ಅದರಲ್ಲಿ ಪಾಲು ಕೇಳುವವನಲ್ಲ. ಏನು? ಅಂಥ ಸ್ಪರ್ಧೆಗಳೂ ಬಹುಮಾನಗಳೂ ಬರಲಾರವು ಎನ್ನುವಿಯಾ? ಗೆಳೆಯಾ, ನೀನರಿಯೆ. ಇಂದಿನ ದಿವಸಗಳಲ್ಲಿ ಅಭಿರುಚಿಗಳು ಬದಲಾಗಿವೆ. ದ್ವಿತೀಯ ಮಹಾಯುದ್ಧದ ನಂತರ ಹುಟ್ಟಿದ ಹೊಸ ಪೀಳಿಗೆಯ ಅಭಿರುಚಿಗಳು ಅದ್ಭುತಕರವಾಗಿವೆ. ಅದಿರಲಿ. ಈ ಸೂಕರರೂಪೀ ಮಾನವ ಅಥವಾ ಮಾನವರೂಪೀ ಸೂಕರದ ಹೆಸರೇನೆಂದು ಕೇಳುವಿಯಾ? 'ಪಮ್ಮೂ' ಅಂತ.

ಶೀತಯ್ಯನವರು ಪಮ್ಮುವಿನಂಥ ಅವತಾರ ಪುರುಷನ ತಂದೆಯಾದರೂ, ಒಂದಿಷ್ಟು ಗರ್ವವಿಲ್ಲದೆ, ತಲೆ ಬಿಸಿಯಾಗದೆ, ಆ ಮಗುವನ್ನಾಡಿಸದೆ, ಮಾತಾಡಿಸದೆ ಅದರ ಪಾಡಿಗೇ ಬಿಟ್ಟು, ಶೀತಳವಾಗಿಯೇ ಇರುವವರು. ಅವರ ಯಜಮಾನಿ ಶೀತಮ್ಮನು, "ಜಗದೋದ್ಧಾರನ ಮಗನೆಂದು ತಿಳಿಯುತ," ಆಡಿಸುತಿದ್ದಳು. ಕುಮಾರ ಪಮ್ಮು, ದಿನಕ್ಕೆರಡು ಬಾರಿ ರಸ್ತೆಗೆ ಉರುಳಿ ಹೋಗಿ, ಹಾಯ್‌ವೇ ಇಲಾಖೆಯವರು ಇರಿಸಿದ ಡಾಮರಿನ ಪೀಪಗಳನ್ನು ನೋಡಿ, ಒಡೆದ ಪೀಪಗಳಿಂದ ಎರಡೆರಡು ಬಾತ್ಲ ಡಾಮರನ್ನೆಳೆದು ಮೈ ಮೇಲೆ ಹಂಚಿಕೊಂಡುದುಂಟು; ಶೀಶಮ್ಮನು, ಈ ಹಾಯ್‌ವೇ ಆಟವನ್ನು 'ಲೀಲೆ'ಯೆನ್ನುತ್ತ, ಕುಮಾರ ಪಮ್ಮುವನ್ನು ಎಣ್ಣೆ ಹಾಕಿ ತೊಳೆದು, ಮತ್ತೂ ಕರಾಳವಾಗಿ ತೋರುವ ಈ ಮಹಾಮಹಿಮನನ್ನು ಎತ್ತಿ ಮುತ್ತಿಟ್ಟುದುಂಟು. ಕುಮಾರ ಪಮ್ಮು ದಾರಿಹೋಕರ ಮೇಲೆ ಕೆಸರು ಚೆಲ್ಲಿದುಂಟು—'ಆಡಿಸುವ ಯಶೋಧೆ'ಯು ಪಮ್ಮುವನ್ನು 'ತುಂಟ ಪೋರ!'

ಎನ್ನುತ್ತ, ಪುನಃ ಈ ಭಯಾನಕ ವಿಗ್ರಹವನ್ನು ತಬ್ಬಿ ಚುಂಬಿಸಿದ್ದುಂಟು. ಈ ಪುಟ್ಟ ಖಲನು ಒಮ್ಮೆ ಹಾಲಿನವಳ ಕಾಲೆಳೆದು, ಹಾಲಿರಿಸಿದ ಪಾತ್ರೆಗಳ ಬುಟ್ಟಿಯನ್ನು ಧರಣಿಗಿಳಿಸಿದ್ದಂದು ಶೀತಮ್ಮನ ಸಂತೋಷಕ್ಕೆ ಪಾರವೇ ಇಲ್ಲದೆ,—ಆ ಖಲ ಮಾತೆಯು 'ಹೆಂಯರ್!' ಎಂದು ಆ ಪ್ರಕರಣವನ್ನು ಅಲ್ಲಿ ಮುಗಿಸಿ, ಅಂದು ಆರೇಳು ಕೃಷ್ಣಪರ ಹಾಡುಗಳನ್ನು ಹಾಡಿದ್ದುಂಟು. ಒಮ್ಮೆ ಈ ಬಾಲಕಲುಚ್ಚನು, ತನ್ನ ಒಂದು ವಿಶಿಷ್ಟ ಆಟದ ಮಾದರಿಯಾಗಿ ಈ ಕೀಣುವನ್ನು ಕೈಗತ್ತಿಯಿಂದ ಹೊಡೆವ ಸಂದರ್ಭದಲ್ಲಿ ಈ ಕೀಣುವು ಅದ್ಭುತಕರವಾಗಿ ಅರಡಿ ನೆಗೆಯದಿದ್ದರೆ, ಗೆಳೆಯಾ! (ಇಲ್ಲಿ, ಕೀಣು ಗದ್ಗದ ಕಂಠನಾದನು)--ತುಂಡರಿಸಲ್ಪಟ್ಟು ಹತ್ತಿಯಲ್ಲಿ ಸುತ್ತಿದ ವನ್ನ ಹೆಣದೊಂದಿಗೆ ನೀನು ಸ್ಮಶಾನ ಯಾತ್ರೆಮಾಡಿ ಇಂದಿಗೆ ಸರಿಯಾಗಿ ಆರು ತಿಂಗಳು ಮೂರು ದಿನ ಸಲ್ಲುತಿತ್ತು. ಆಗಲೂ ಈ ಶೀತಮ್ಮನು ದೂರ ನಿಂತು, ಪುತ್ರ ಪ್ರೇಮ ದಿಂದ, 'ಹೆಂಯರ್' ಎಂಬ ಶಬ್ದ ಕೂಡ ಮಾಡದೆ, ನಾನು ನೆಗೆದ ಚಮತ್ಕಾರ ಕ್ಕಾಗಿ ನಗು ಬಂದು, ಮುಖ ತಿರುಗಿಸಿ ನಗಬೇಕೆ? ಅಷ್ಟನ್ನೂ ಮರೆತು,—ಮಗುವೆಂದರೆ ಮಗು—ಇಷ್ಟು ವಯಸ್ಸಾದ ಮೇಲೆ ಅದರ ಕೈಯಿಂದ ಮರಣ ಹೊಂದಬಾರದು-ಎಂಬ ಒಂದೇ ಸದುದ್ದೇಶದಿಂದ ನಾನಿರುತ್ತಿರಲು, ಶೀತಮ್ಮನು ಒಂದು ದಿನ, ಪೆಪ್ಪರ್ ಮಿಠಾಯಿ ಹಿಡಿದು ನಿಂತ ನನ್ನನ್ನು ಸಂಬೋಧಿಸುತ್ತ, "ತಮಗೆ ಹೆಚ್ಚಿಗೇನೂ ಕೆಲಸವಿಲ್ಲದಿದ್ದರೆ, ಪಮ್ಮುವನ್ನು ಒಮ್ಮೆ ಸೆಲೂನಿಗೊಯ್ದು 'ಕ್ರಾಪ್' ಮಾಡಿಸಿ ತರುವಿರಾ?" ಎಂದು ಪ್ರಶ್ನಿಸಿ ದಳು.

ಮಿತ್ರಾ, ಪೂರ್ವಕಾಲದಲ್ಲಿ ನಾನು "ಅಳುವ ಹೆಂಗುಸನ್ನೂ ನಗುವ ಗಂಡುಸನ್ನೂ" ನಂಬುತ್ತಿರಲಿಲ್ಲ. ಇತ್ತೀಚೆಗೆ, "ನಗುವ ಹೆಂಗುಸನ್ನೂ ಅಳುವ ಗಂಡುಸನ್ನೂ'' ನಂಬುವುದಿಲ್ಲವೆಂದು ಶಪಥ ಮಾಡಿರುತ್ತೇನೆ. "ಪಮ್ಮುವನ್ನು (ಕೀಣು, ಇಲ್ಲಿ ಪುನಃ ಬಲವಾಗಿ ನಡುಗಿದನು.)—ಸೆಲೂನಿಗೊಯ್ದು ಕ್ರಾಪ್ ಮಾಡಿಸಿ ತರುವಿರಾ?'' ಎಷ್ಟು ಸುಲಭ!—ಎಂದುಕೊಂಡೆ. ನನ್ನ ತಾಯಿ ಸತ್ತಿದ್ದರೂ, ಶೀತಮ್ಮನೊಬ್ಬಳು ತಾಯಿ, ಪಮ್ಮು ಒಬ್ಬ ಚಿಕ್ಕ ತಮ್ಮ ಎಂದುಕೊಂಡೆ. ಕುಮಾರನು, ನಾವಿಕನ ಪೋಷಾಕು ಹಾಕಿಕೊಂಡು ಹೊರಗೆ ಬಂದು, ತನ್ನ ಕೈಯೆತ್ತಿ ನನ್ನ ಕೈಯಲ್ಲಿರಿಸಿದನು. ನಾನು ಆ ಚಿಕ್ಕ ಕರಡಿಯನ್ನು ನಡೆಸಿಕೊಂಡು, ಬೀದಿಗಿಳಿದೆ.

ಆಗ, ಬೆಳಿಗ್ಗೆ ಸುಮಾರು ಎಂಟುವರೆ ಗಂಟೆ ಹೊತ್ತು. ಕುಮಾರ ಷಮ್ಮು ನನ್ನೊಂದಿಗೆ ಉರುಳಿ ಬರುತಿದ್ದನು. ಹದಿನೇಳು ಕಡೆಗಳಲ್ಲಿ, ಪೆಪ್ಪರ್ ಮಿಠಾಯಿ ಭರಣಿಗಳನ್ನು ಕಂಡು, ಆ ಜಿಜ್ಞಾಸು ಕಡೆದನು. "ಮಾಮಾ, ಪೈಯ್ಯಿ ಮಿಯ್ಯಿ" ಎಂದನು. ಮಿತ್ರಾ, ಇಷ್ಟೇ ಭಾಷಾಜ್ಞಾನದಿಂದ ಈ ಮಹಾಪುರುಷನು ಸುಖವಾಗಿ ಸಂಸಾರ ಸಾಗಿಸಿಕೊಂಡಿರುತಿದ್ದನು. "ಪೆಯ್ಯಿ ಮಿಟ್ಯಿಯನ್ನು ಮತ್ತೆ ಮನೆಗೆ ಮರಳುವಾಗ ತೆಗೆಸಿಕೊಡುವೆ" ಎಂದು ಸಮಾಧಾನ ಹೇಳುತ್ತ ಹೇಗೂ ಕೆಲವಡಿ ದೂರಕ್ಕೆ ಒಯ್ದೆ. 'ಪೆಯ್ಯಿ ಮಿಯ್ಯಿ' ಕೊಟ್ಟು, ಸೆಲೂನಿನ ಕುರ್ಚಿಯಲ್ಲಿ ಈ ಪ್ರಾಣಿಯನ್ನು ಇರಿಸಿದರೆ, ಇರುವೆಗಳು ಮುತ್ತಿ ಈ ಅವತಾರ ಪುರುಷನನ್ನು ಮುಗಿಸಿ ಬಿಡಬಹುದು ಎಂದೊಂದು ಭಯವು ಪ್ರತ್ಯೇಕವಾಗಿತ್ತು. ಗೆಳೆಯಾ! ದೇಶದ ವ್ಯಾಪಾರ ವೃದ್ಧಿಯಾಗುತ್ತಿದೆ ಎನ್ನುತ್ತಿರುವವರಲ್ಲಾ—ಈ ಪೆಪ್ಪರ್ ಮಿಠಾಯಿ ಅಂಗಡಿಗಳು ಮತ್ತು ಸೆಲೂನುಗಳ ಸಂಖ್ಯೆ ಲೆಕ್ಕ ಮಾಡಿಯೇ ಆ ರೀತಿ ವರದಿ ಬರೆಯುತ್ತಿರುವರೆಂದು ನನಗೆ ಬಲವಾದ ಸಂಶಯವಿದೆ. ಮತ್ತು 'ಕುಟುಂಬ ಯೋಜನೆ' ಯಾನೆ 'ಮಿತ ಸಂತತಿ' ಎಂಬ ಕೂಗು ಎದ್ದಿದೆಯಲ್ಲ—ಅದು ಕುಮಾರ ಷಮ್ಮುವಿನಂಥ ಘಟೋತ್ಕಚರನ್ನು ಕಂಡನಂತರ ಉಂಟಾದ ವಿಚಾರಕ್ರಾಂತಿ ಎಂದು ನನಗೆ ಈಗ ಖಚಿತವಾಗಿದೆ.

ಹದಿನೆಂಟನೇ ಪೆಪ್ಪರ್‌ಮಿಠಾಯಿ ಅಂಗಡಿ ಬಳಿ ಕುಮಾರನು ಕುಯ್ಯೋ ಮುರ್ರೋ ಎಂದು ಅರ್ಭಟಿಕೊಟ್ಟನು. ಮೂರು ಮುನಿಸಿಪಲ್ ನಾಯಿಗಳು ಈ ಅರ್ಭಟಿ ಕೇಳಿ ದಿಗಿಲುಬಿದ್ದು,—ಇದು ಇತ್ತೀಚೆಗೆ ಮುನಿಸಿಪಾಲಿಟಿಯವರು ಉರುಲು ಹಾಕಿ ಒಯ್ದು ಕೊಲ್ಲುವ ಬದಲಾಗಿ ಕ್ಷಣಾರ್ಧದಲ್ಲೆ ಮುಟ್ಟದೆ ಕೊಲ್ಲಲು ತರಿಸಿದ ಮಿತವ್ಯಯದ ಹೊಸ ಯಂತ್ರವಿರಬೇಕು ಎಂಬ ಸಂದೇಹದಿಂದಲೋ ಏನೋ—ಅತಿ ಶೀಘ್ರದಲ್ಲಿ ತಪ್ಪಿಸಿಕೊಳ್ಳುವ ದಾರಿ ಯಾವುದೆಂದು ಎರಡೂ ಬದಿಗಳಿಗೆ ನೋಡಿ, ಕೊನೆಗೆ ಆರ್ತನಾದ ಮಾಡಿ, ಒಂದು ಕ್ಷಣದೊಳಗೆ ಆ ಹದಿನೆಂಟು ಪೆಪ್ಪರ್‌ಮಿಠಾಯಿ ಅಂಗಡಿಗಳ ಕೇರಿಯನ್ನೂ ದಾಟಿ ಮಾಯವಾದುವು. ಗೆಳೆಯಾ! ಆ ನಾಯಿಗಳು ಕಲ್ಯಾಣ ರಾಷ್ಟ್ರವನ್ನು ಸೇರುವೆವೆಂದು ಇನ್ನೊಂದು ಮುನಿಸಿಪಾಲಿಟಿಯನ್ನು ಸೇರಲು ಹೋಗಿದ್ದರೆ, ಅವುಗಳಿಗೆ ತಿಲಾಂಶದಷ್ಟು ಮಿದುಳಿಲ್ಲವೆನ್ನುವೆನು. ಅಲ್ಲಿ ಕುಮಾರ ಷಮ್ಮುಗಳು ಮನೆಮನೆಗಳಲ್ಲೂ ಅರ್ಭಟಿಕೊಡು

ತ್ತಿರುವುದನ್ನು ಕೇಳಿ ಈ ನಾಯಿಗಳು ಬದುಕಲುಂಟೇ?........ಆ ನಾಯಿಗಳೇಕೆ, ನಾಯಿಗಿಂತ ಸ್ವಲ್ಪ ಉನ್ನತಸ್ಥಾನದಲ್ಲಿರುವ ನನ್ನ ಎದೆ ಕೂಡ ಡಬ್‌ಡಬ್ ಎಂದಿತು. ಕಿಸೆಯಿಂದ ಬಲಾತ್ಕಾರವಾಗಿ ಎರಡಾಣೆ ಪಾವಲಿಯನ್ನು ಕೆಳಗಿಳಿಸಿ, ಆ ಹದಿನೆಂಟನೇ ವಿಷಗಾರನಿಂದ ಕೆಂಬಣ್ಣದ ದುಯ್ಯಂ ತರಗತಿಯ ವಿಷವನ್ನು ಖರೀದಿಸಿ, ಕುಮಾರ ಪಮ್ಮುವಿಗೆ ಕೊಟ್ಟೆ. ಅರ್ಭಟೆಯ ವೇಗವನ್ನು ಫಕ್ಕನೆ ತಡೆದುಕೊಂಡು, ಬಿಕ್ಕುತ್ತ ಬಿಕ್ಕುತ್ತ ಈ ಬಾಲಕ ಧೂರ್ತನು, ಅವುಗಳನ್ನು ಬಾಯಿಯೊಳಗೆ ಹಾಕಿ ಚೀಪುತ್ತ, ನಡುನಡುವೆ 'ಯೊಯ್ಯಯ್ಯ' ಎಂದಾವುದೋ ಬಿನ್ ಸರಕಾರೀ ಭಾಷೆಯಲ್ಲಿ ಏನೋ ಹೇಳಲು ಯತ್ನಿಸಿ, ಆಗಾಗ್ಗೆ ಆ ಸಕ್ಕರೆ ಗೋಲಗಳನ್ನು ಕೈಯಿಂದ ಹೊರ ತೆಗೆದು ಪುನಃ ಬಾಯಿಗೆ ಹಾಕಿ, ನನ್ನ ಧೋತಿಗೆ ಕೈಯುಜ್ಜುತ್ತ ನಡೆದು ಬಂದನು. ವಿಚಿತ್ರ, ಜಗತ್ತೆಂದರೆ ಹೀಗೇ—ಉಪಕಾರ ಮಾಡಿದವರಿಗೆ ಅಪಕಾರ!

ಸೆಲೂನುಗಳಲ್ಲಿ "ಅಂಬಾ ಭವಾನಿ ಹೇರ್ ಕಟ್ಟಿಂಗ್ ಸೆಲೂನು" ಎಂಬುದು ಇತ್ತೀಚೆಗಿನದು. ಆ ಹೆಸರೇಕೆ ಎಂದು ಕೇಳದಿಯಾ? ಚೆನ್ನಾಯಿತು. ಗಂಡುಸಿನ ಕೇಶನಾಶಕ್ಕೆ ಹೆಂಗುಸಿನ, ಅದರಲ್ಲೂ ದೇವಿ ಭಗವತಿಯ ಹೆಸರನ್ನೇಕೆ ಇರಿಸಿದರೆಂಬುದು ನಿನ್ನಂತೆ ನನಗೂ ಸಮಾಧಾನವಿಲ್ಲ. ಆದರೆ, ಮಹಾತ್ಮರ ಹೆಸರಿನ ಕಾಫಿ ಹೊಟೇಲಿನ ವಿಷಯ ನೀನು ಆಕ್ಷೇಪಿಸುತ್ತಿಲ್ಲವೇಕೆ?—ಹೋಗಲಿ, ಬಿಡು. ಅಂಬಾಭವಾನಿ ಸೆಲೂನಿನಲ್ಲಿ ನಾಲ್ವರು ಮೌನಿಗಳು, ಕತ್ತರಿಗಳನ್ನು ಹಿಡಿದುಕೊಂಡು ನಾಲ್ಕು ತಲೆಗಳ ಮೇಲೆ ಅಧ್ಯಕ್ಷತೆ ವಹಿಸಿದ್ದರು. ಆ ನಾಲ್ವರಲ್ಲೊಬ್ಬನ ಕೈಗೆ ಬಂಗಾರದ 'ಪಾಟ್ಲೆ' ಇದ್ದುದನ್ನು ಕಂಡು ಇವನೇ ಆ ಅಧ್ಯಕ್ಷರ—ಅಧ್ಯಕ್ಷನೆಂದು ಸುಲಭವಾಗಿ ಊಹಿಸಿ, ಅಲ್ಲಿ ಒಂದು ಬೆಂಚಿನಲ್ಲಿ ಕಾಯುತ್ತ ಕುಳಿತೆ. ಒಂದು ಗಂಟೆಯ ನಂತರ ಒಂದು ತಲೆಯನ್ನು ಮುಗಿಸಿ ಮ್ಹಾಲಕನು ಕೆಂಪು ಎಣ್ಣೆಯಿಂದ ಆ ತಲೆಯನ್ನು ತನಗೆ ಮನಸ್ಸಿದ್ದಷ್ಟು ಹೊತ್ತು ಹಿಸುಕಿ ಆಟವಾಡಿದನು. ಆ ಮೇಲೆ ನನ್ನ ತಲೆಯನ್ನು ನೋಡಿ, ಹಸಿದ ಹುಲಿಯಂತೆ ಮುಖ ಅರಳಿಸಿ, ಮರುಕ್ಷಣದಲ್ಲೆ ಕ್ರಾಪ್ ನನಗಲ್ಲ—ಕುಮಾರ ಪಮ್ಮುವಿಗೆ—ಎಂದು ತಿಳಿದು, ತನ್ನ ತಲೆಯಲ್ಲಾಡಿಸುತ್ತ, "ನಾವು ಶುಕ್ರವಾರ, ಶನಿವಾರ

ಮತ್ತು ರವಿವಾರ ಈ ಮೂರು ದಿನಗಳಲ್ಲಿ, ಚಿಕ್ಕ ಮಕ್ಕಳ ತಲೆ ಕತ್ತರಿಸುವುದಿಲ್ಲ" —ಎಂದನು.

"ಹಾಗಾದರೆ, ಸೋಮವಾರ........?" ನಾನು ಬಾಯ್ತೆರೆದೆ.

"ಇಲ್ಲ! ಸೋಮವಾರ, ಮಂಗಳವಾರ ಮತ್ತು ಬುಧವಾರ ಪ್ರಾಯಸ್ಥರ ತಲೆಗಳನ್ನು ಮಾತ್ರ ಕತ್ತರಿಸುತ್ತೇವೆ"—ಎಂದನು.

ನನಗೆ ವಿಷಯವು ಸ್ವಲ್ಪ ತಿಳಿಯಿತು. "ತಿಳಿಯಿತು. ನಾನು ಗುರುವಾರ ಬರಬೇಕೆಂದು ನಿನ್ನ ಆಮಂತ್ರಣ, ಅಲ್ಲವೇ?" ಎಂದು ಪ್ರಶ್ನಿಸಿದೆ.

ಕೂಡಲೇ ಆ ಪಾಟ್ಲೀ-ಪುತ್ರನು, "ಗುರುವಾರ—ವಾರದ ರಜೆ!" ಎಂದು ಮುಗುಳ್ನಕ್ಕನು.

ಮಿತ್ರಾ, ನನಗೆ ಕೋಪ ನೆತ್ತಿಗೇರಿತು. ನಾನು ಒಂದು ಗಂಟೆ ಕಾಲ ಇಲ್ಲಿ ಕುಳಿತದ್ದೇಕೆ, ಬಸ್ ಕಾಯಲಿಕ್ಕೇ—ಎಂದು ಅವನನ್ನು ಪ್ರಶ್ನಿಸಿದೆ. "ಸ್ವಾಮೀ, ಕೆಲವರು ಇಲ್ಲಿಗೆ ಪೇಪರ್ ಓದಲು ಬರುತ್ತಾರೆ, ಮತ್ತೆ ಕೆಲವರು ಕಳವು-ಮಾರಾಮಾರಿಗಳ ಸುದ್ದಿ ಕೇಳಲಿಕ್ಕೆ, ಇನ್ನು ಕೆಲವರು ಈಗ ನಡೆಯುತ್ತಿರುವ ಚಲಚ್ಚಿತ್ರಗಳ ಕುರಿತು ಮಾಹಿತಿ ಸಂಗ್ರಹಿಸುವುದುಂಟು. ನಿಮಗೆ ಸತ್ಯ ಹೇಳುವುದಾದರೆ, ಐದು ಪತ್ರಿಕೆಗಳವರು ಹೆಚ್ಚಿನ ಸುದ್ದಿಗಳನ್ನು ಇಲ್ಲಿಗೆ ಬಂದೇ ಕೇಳಿಕೊಂಡು ಹೋಗಿ ತಮ್ಮ ಪತ್ರಿಕೆಗಳನ್ನು ಅಚ್ಚುಹಾಕುತ್ತಾರೆ........" ಎಂದವನು ಹೇಳುತ್ತಿರಲು,—ಕುಮಾರನನ್ನು ಕುಂಬಳದಂತೆ ಎತ್ತಿ ಸಟಸಟನೆ ಮೆಟ್ಟಲುಗಳನ್ನಿಳಿದು, ಮುಂದೆ ಹೋದೆ. ತೊಡೆಗೆ ಚುಚ್ಚಿದಂತಾಯಿತೇನೆಂದು ನೋಡಿದಾಗ, ಕುಮಾರ ಪಮ್ಮುವಿನ ಕೈಯಲ್ಲಿ ಒಂದು ಕತ್ತರಿಯಿತ್ತು. ಹಿಂದಿರುಗಿ ಆ ಕತ್ತರಿಯನ್ನು "ಅಂಬಾ ಭವಾನಿ" ಕಂಪೆನಿಗೆ ಸಲಾಯಿಸಿ ಮುಂದಡಿಯಿಟ್ಟೆ.

ಸೆಲೂನುಗಳಿಗೇನು ಧಾಡಿ? ಒಂದು ತಲೆಗೆ ಮೂರರಂತಿವೆ, ಒಂದೊಂದರಲ್ಲಿ ನಾಲ್ವರಂತೆ ಇದ್ದಾರೆ ಎಂದುಕೊಳ್ಳುತ್ತ, ಕೆಲವು ಗಜ ದೂರದಲ್ಲಿನ "ನಿಯೋ ಹಿಂದ್ ಮಾತಾ ಹೇರ್ ಕಟ್ಟಿಂಗ್ ಸೆಲೂನಿ"ನ ಮೆಟ್ಟಲುಗಳನ್ನು ಹತ್ತಿದೆ. ನಿಯೋ ನಾಯರನಿಗೆ ಪಾಟ್ಲ ಇರಲಿಲ್ಲ. ಬಂಗಾರದ ಸರಪಣಿಯ ಕೈಯೆತ್ತಿ "ಯಾರಲ್? ನಿಮಕ್ಕೊ ಕುಟ್ಟಿಗೋ?" ಎಂದು ಪ್ರಶ್ನಿಸಿದನು.

"ಕುಟ್ಟಿ" ಎಂದೆ.

ಕತ್ತರಿಯನ್ನು ಕಟಕಟ ಎಂದು ಆಕಾಶಕ್ಕೊತ್ತಿ ಗಾಳಿಯನ್ನು ಕತ್ತರಿಸುತ್ತಲೇ ಒಳಗೊಯ್ದು, ಯಾವುದೋ ಕೊಳೆತ ಮಂಡೆಯ ದುರಸ್ತಿಗೆ ನಿಂತು, ಮಲೆಯಾಳಿ ಭಾಷೆಯಲ್ಲಿ ತನ್ನ ಸಹಾಯಕ ಕೆಲಸಗಾರನೊಡನೆ ತಮಾಷೆಮಾಡಿದನು. ಅವನೂ ಇವನೂ ಕೂಡಿ ಗೊಳ್ಳೆಂದು ನಕ್ಕರು. ಎರಡನೇ ಕುರ್ಚಿಯಲ್ಲಿ ಕುಳಿತು ತಲೆಯನ್ನು ವಿಶ್ವಾಸದಿಂದ ಸೆಲೂನಿನವನಿಗೆ ಒಪ್ಪಿಸಿದವನೊಬ್ಬನು ಆರಂಗುಲ ಹಾರಿ ತಲೆಯನ್ನು ಒತ್ತಿ ಹಿಡಿದನು. ನಾನು ಜುಗುಪ್ಸೆಗೊಂಡು, ಪಮ್ಮುವನ್ನು ಒಂದೇ ಕೈಯಿಂದ ಎತ್ತಿ ನೇತಾಡಿಸಿ ರಸ್ತೆ ಬದಿಯ ಚರಂಡಿಗೆ ಇಳಿಸಿ, ಮೆಟ್ಟಲಿಳಿದು ಬಂದು, ಆ ಮೇಲೆ ಚರಂಡಿಯಿಂದ ಆ ಪಾರ್ಸೆಲನ್ನೆತ್ತಿ ಮುಂದರಿದೆ.

ಪಟೇಲ್ ಸೆಲೂನಿನವನು ಬಲು ವಿನಯಶೀಲನು ಎಂಬ ಪ್ರಖ್ಯಾತಿಯಿತ್ತು. ಕುಮಾರ ಪಮ್ಮುವಿನ ತಲೆಯೆನ್ನುತ್ತಲೆ, ಅವನ ಮುಖದ ಮೇಲಿನ ನಗುವು ಒಮ್ಮಿಂದೊಮ್ಮೆ ಮಾಯವಾಯಿತು.

"ನಿನ್ನಿಂದಲೂ ಆಗದೇ?" ಎಂದು ಕೇಳಿದೆ.

"ಸಾಧ್ಯವಿಲ್ಲ. ಹದಿನೈದಕ್ಕಿಂತ ಚಿಕ್ಕವರ ತಲೆ ಕತ್ತರಿಸಲು ನಮಗೆ ಸರಕಾರದ ಲೈಸೆನ್ಸ್" ಇಲ್ಲ ಎಂದನು.

"ಅಂಥ ಒಂದು ಲೈಸೆನ್ಸೂ ಇದೆಯೇ?" ಎಂದು ಕೇಳಿದೆ, ಆಶ್ಚರ್ಯದಿಂದ.

"ನಿಜಸ್ಥಿತಿಯೇನೆಂದರೆ, ಎರಡು ವರ್ಷಗಳ ಹಿಂದೆ ಇದೇ ಸೈಜಿನ, ಇದೇ ಮುಖದ ಇದೇ ಬಣ್ಣದ ಮಗುವು, ತಲೆ ಕತ್ತರಿಸುವಾಗ ಉರುಡಾಡಿ ಕತ್ತರಿಬೊನೆಗೆ ತನ್ನ ಕಣ್ಣುಗಳನ್ನು ಸಿಕ್ಕಿಸಿಕೊಂಡು ನಮ್ಮ ಮೇಲೆ ಕೇಸು ಆದ ಮೇಲೆ, ನಾವು ಪ್ರಾಯ ಮತ್ತು ಸೈಜು ನೋಡಿ ಮಾತ್ರ ಕತ್ತರಿ ಕೈಗೆ ತೆಗೆದುಕೊಳ್ಳುತ್ತೇವೆ ಸ್ವಾಮಿ" ಎನ್ನುತ್ತ, ಕುಮಾರ ಪಮ್ಮುವನ್ನು ಧೈರ್ಯವಾಗಿ ಒಂದರೆಕ್ಷಣ ದಿಟ್ಟಿಸಲು ಸೋತು, ಮೈಝಾಡಿಸಿ, ಮುಖ ತಿರುಗಿಸಿದನು.

ಮುಂದರಿದೆ. ಆಗಲೇ ಘಂಟೆ ಹತ್ತು ಆಗಿತ್ತು. ಕುಮಾರ ಪಮ್ಮು, ಹತ್ತೊಂಭತ್ತನೇ ಪೆಪ್ಪರ್‌ಮಿಠಾಯಿ ಅಂಗಡಿಯನ್ನು ಪತ್ತೆಹಚ್ಚಿ, ರಸ್ತೆಯಲ್ಲಿ ಥಕ್ಕನೆ ನಿಂತು. "ಪೆಯ್ಯಿ ಮಿಯ್ಯಿ" ಎಂದನು. ಆರ್ಭಟೆಗೆ ಮೊದಲೇ ಎರಡಾಣೆ ಪಾವಲಿ ತೆಗೆದು, ಖರೀದಿಸಿ, ಕೊಟ್ಟೆ. ಪ್ರಯಾಣ ಸಾಗಿತು.

"ಕಂಚಿಮಾರಾ ಸೆಲೂನ್"—"ತಿರುಪತಿ ಸ್ಪೆಶಲ್"—"ಡಬ್ಬಲ್ ಬೊಂಬಾಯಿ"—"ನಿಯೋ ಡಬ್ಬಲ್ ಬೊಂಬಾಯಿ"—"ಗುರುಸಮರ್ಥ"—"ಷಹಾಸ್ ಷಾ"—"ಚಂದ್ರಲೇಖಾ"—ಹೀಗೆ ಸುಮಾರು ಇಪ್ಪತ್ತು ಸೆಲೂನುಗಳಲ್ಲಿ ಕುಮಾರ ಪಮ್ಮುವನ್ನು ತೋರಿಸಿಯೂ ಸೋತೆ. ಆರಂಗುಲ ಬೆಳೆದ ಕೇಶರಾಶಿಯ ಚಿಕ್ಕ ತಲೆಗೆ ಇಪ್ಪತ್ತು ಮಂದಿ ಗಂಡುಸರು ಬೆದರಿ, ನಕಾರ ಹೇಳಿದರು. ಎರಡು ಸೆಲೂನುಗಳಲ್ಲಿ "ಹದಿನೆಂಟು ವರ್ಷಗಳಿಗಿಂತ ಕೆಳಗಿನ ಬಾಲಕರಿಗೆ ಇಲ್ಲಿ ಕ್ರಾಪ್ ಮಾಡುವುದಿಲ್ಲ" ಎಂದು ಸ್ಪಷ್ಟವಾಗಿ ಬರೆದು ಹಲಗೆ ತೂಕಹಾಕಿದ್ದರು. ಒಂದು ಕಡೆ, ಚಿಕ್ಕ ಬಾಲಕರು ನುಗ್ಗಿದರೆ ಹೆದರಿಸಿ ಓಡಿಸಲು ತೆಳ್ಳಗಿನ ಬೆತ್ತವನ್ನು ಹಿಡಿದ ಪಠಾಣನನ್ನು ನಿಲ್ಲಿಸಿ, ಅವನ ಮೀಸೆಗಳನ್ನು ಮಯಣದಿಂದ ಸೆಟ್ಟಗೆಮಾಡಿದ್ದರು.

ತುಸುದೂರ 'ಅಝಾದ್ ಹಿಂದ್' ನಾಮಾಂಕಿತ ಆಯುಷ್ಕರ್ಮ ಶಾಲೆ ಸಿಕ್ಕಿತು. ಘಂಟೆ—ಮಧ್ಯಾಹ್ನ ಹನ್ನೆರಡು ದಾಟಿತ್ತು. ನನ್ನ ಆಪಾದ ಮಸ್ತಕ ಬೆವರು ಹರಿಯುತಿತ್ತು. ಹೃದಯದೊಳಗೆ ಶೀತಮ್ಮನಂಥವರು ಈ ಜಗತ್ತಿನಲ್ಲಿ ಬದುಕಿರುವುದರಿಂದ ಹಿಂದೂದೇಶಕ್ಕುಂಟಾಗುವ ಪ್ರಯೋಜನಗಳೇನು ಎಂಬ ಪ್ರಶ್ನೆಯುದ್ಭಿತ್ತು. ಕುಮಾರ ಪಮ್ಮುವಿನಂಥ ಬಾಲಕರ ತಂಡವು ಬೆಳೆದರೆ ನಾಡಿನ ಕಲ್ಯಾಣವಾಗಬಹುದೇ ಎಂಬ ಎರಡನೇ ಪ್ರಶ್ನೆಯು ತಾಂಡವವಾಡುತಿತ್ತು. ಗಡಂಗುಗಳನ್ನು ಮುಚ್ಚುವ ಬದಲಾಗಿ ಸೆಲೂನುಗಳನ್ನು ಸರಕಾರವು ಮುಚ್ಚಿದ್ದರೆ ಇತಿಹಾಸಪೂರ್ವಕ ಸ್ಥಿತಿಯೇನೂ ಸಂಭವಿಸುತ್ತಿರಲಿಲ್ಲ ಎಂಬ ತೀರ್ಮಾನವು ನನ್ನಲ್ಲಿ ದೃಢಗೊಳ್ಳಲಾರಂಭಿಸಿತ್ತು. ಕುಮಾರ ಪಮ್ಮುವನ್ನು ಇಷ್ಟುಹೊತ್ತು ಬಹಿರಂಗ ರಸ್ತೆಯಲ್ಲಿ ತಿರುಗಾಡಿಸುವ ಬದಲಾಗಿ, ಒಳ್ಳೇ ಜಾತಿಯ ಒಂದು ಕೋತಿಯನ್ನು ಹಿಡಿದು ತಿರುಗಿದ್ದರೆ, ಒಬ್ಬನಿಗೆ ಐದಾರು ರೂಪಾಯಿಯಷ್ಟಾದರೂ ಸಂಪಾದನೆಯಾಗಲಡ್ಡಿಯಿಲ್ಲ—ಎಂಬೊಂದು ವಿಚಾರವೂ ಅಸ್ಪಷ್ಟವಾಗಿ ಮನಸ್ಸಿನಲ್ಲಿ ಮೂಡಿಬರುತ್ತಿತ್ತು. ಇಂಥ ಪವಿತ್ರ ವೇಳೆಯಲ್ಲಿ "ಅಝಾದ್ ಹಿಂದ್" ಎಂಬ ಹಲಗೆ ನೋಡಿ, ಇಪ್ಪತ್ತೊಂದನೇ ಕೇಶನಾಶನಾಲಯದವನು ತಿರಸ್ಕರಿಸಿದರೆ, ಕುಮಾರ ಪಮ್ಮುವನ್ನೇ ಆಯುಧವಾಗಿ ಎತ್ತಿ ಅವನಿಗೆ ಬಡೆದು, ಕೆಲವು ಕನ್ನಡಿಗಳನ್ನು ಚೂರುಮಾಡಿ, ಕುರ್ಚಿಗಳನ್ನು ರಸ್ತೆಗೆ ಬಿಸಾಡಿ, ಕಾರಾಗ್ರಹಕ್ಕೆ ತೆರಳಿ, ಸ್ವಸ್ಥವಾಗಿ ಅಲ್ಲಿ ಶೇಷಾಯುಷ್ಯವನ್ನು

ಕಳೆಯುಬೇಕೆಂಬ ಆಲೋಚನೆಯೂ ಉದಯಿಸುತಿತ್ತು. ಏನು? ಭಯಂಕರ ಎಂದಿಯಾ, ಮಿತ್ರಾ? ಎಂದಿಗೂ ಇಲ್ಲ. ಕಾರಾಗ್ರಹಗಳಲ್ಲಿ ಕುಮಾರ ಷಮ್ಮುಗಳಿಲ್ಲವೆಂದು ನಿನಗೆ ತಿಳಿಯದೇ? ಕುಮಾರ ಷಮ್ಮುಗಳನ್ನು ಪೋಲೀಸರು ಕೂಡ ಕೈಯಿಂದ ಮುಟ್ಟುವುದಿಲ್ಲ. ದೊಡ್ಡ ಚಿಮುಟಗೆಗಳಿಂದೆತ್ತಿ ಕೂಡ ಕಾರಾಗ್ರಹದೊಳಗೆ ಬಿಸಾಡುವುದಿಲ್ಲ. ಅವರೆಲ್ಲರೂ ಅದರ ಪರಿಣಾಮ ಬಲ್ಲರು. ತಿಳಿಯಿತೇ? ನಾನು, ಸಿದ್ಧಾರ್ಥವಾಡಿ "ಅರ್ಝಾದ್ ಹಿಂದ್" ಮೆಟ್ಟಲುಗಳನ್ನು ಹತ್ತಿದೆ. "ಹೋಯ್! ಈ ಮಗುವಿನ ತಲೆ ಕತ್ತರಿಸಬೇಕು!" ಎಂದು ಅಪ್ಪಣೆಮಾಡಿದೆ. ಅದು, ಒಬ್ಬನೇ ಇರುವ ಸೆಲೂನ್.

"ಅವಶ್ಯವಾಗಿ! ಸಂದೇಹವೇನು?" ಎನ್ನುತ್ತ ಅರ್ಝಾದ್ ಮ್ಹಾಲಕನು, ಒಂದು ಹೊದಿಕೆವಸ್ತ್ರ ಎತ್ತಿ ಝಾಡಿಸುತ್ತ, "ಎಲ್ಲಿದೆ ಮಗು?" ಎಂದು ಪ್ರಶ್ನಿಸಿದನು.

ನೋಡಿದೆ. ಕುಮಾರ ಷಮ್ಮು ಕಾಣೆಯಾಗಿದ್ದನು!

ಮಿತ್ರಾ, ನೋಡಿದೆಯಾ ಜಗತ್ತನ್ನು! ಅಷ್ಟೊಂದು ಕಷ್ಟಪಟ್ಟು, ಜೀವದ ಹಂಗು ಇಲ್ಲದೆ ಡಾಮರು ರಸ್ತೆಗಳಲ್ಲಿ ನಡೆದು, ಆಯುಷ್ಯವರ್ಷದ ಇಪ್ಪತ್ತು ಗಡಂಗುಗಳಲ್ಲಿ ವಿಚಾರಿಸಿದ ಮೇಲೆ ಇಪ್ಪತ್ತೊಂದನೇ ಗಡಂಗಿನಲ್ಲಿ ವಿಜಯಶ್ರೀ ಮಾಲೆಹಾಕಲು ಬಂದಳು—ಎನ್ನುವಾಗಲೇ ಕೊರಳು ಎಲ್ಲೋ ಕಾಣೆಯಾಗಿದೆ ಎಂದು ಆಗತಾನೆ ತಿಳಿದರೆ ನಿನಗೇನಾಗಬಹುದು? ಗಿರ್ರನೆ ಮೂರು ಸುತ್ತು ತಿರುಗಿ—(ಬಿಸಿಲಿಗೆ ಬಂದರೆ ಈ ಚಲನವು ಇನ್ನೂ ಸುಲಭ) —ಸುತ್ತಲೂ ಷಮ್ಮುವನ್ನು ಹುಡುಕಿದೆ. ಅರ್ಝಾದ್ ಮ್ಹಾಲಕನೂ, ವಸ್ತ್ರವನ್ನೆತ್ತಿ, ಮೇಜಿಯಡಿ, ಕುರ್ಚಿಯಡಿ, ಗೋಡೆ ಕನ್ನಡಿಯ ಅಂಚುಗಳು, ಸೆಲೂನಿನ ಮೆಟ್ಟಲು, ರಸ್ತೆಯ ಚರಂಡಿ ಇಷ್ಟನ್ನು ಹುಡುಕಿದನು. ಒಮ್ಮಿಂದೊಮ್ಮೆ ಖಣಖಣ ಎಂಬ ಶಬ್ದವಾಯಿತು. ಅರ್ಝಾದ್ ಮ್ಹಾಲಕನು, ಅಲ್ಲೆ ತೂಗುವ ಒಂದು ತೆರೆಯನ್ನು ಸರಿಸಿ, ಒಳಗೆ ಹಾರಿ, ಮರುಕ್ಷಣದಲ್ಲಿ ಷಮ್ಮು ರಾಕ್ಷಸನನ್ನೂ, ಈ ಮೊದಲು ಪೂರ್ಣಾಂಗವಾಗಿದ್ದ ಎಣ್ಣೆ ಬಾಟಲಿಯ ಅವಶೇಷವನ್ನೂ ಹೊರಗೆ ತಂದನು. ಆ ಸೆಲೂನಿನ ತೆರೆಯಾಚೆ, ಏಳು ಬಣ್ಣಗಳ ಏಳು ಬಗೆಯ ತೈಲಗಳು, ಮೂವತ್ತು ತರದ ವಾಸನೆಗಳ ಮೂವತ್ತು 'ಸ್ನೋ'ಗಳು, ಕಪ್ಪು ಹೊರತು ಮಿಕ್ಕ ಎಲ್ಲತರದ

ಬಣ್ಣಗಳ ಪೌಡರುಗಳು, ಮೂಸಿದ ಕ್ಷಣಕ್ಕೇ ಮುಖವು ಮೂಷಿಕಾಕಾರವಾಗುವ 'ಸೆಂಟು'ಗಳು—ಮೊದಲಾದುವು ಇರಿಸಲ್ಪಟ್ಟಿದ್ದುವು. ಪಮ್ಮು ಒಂದು ದೊಡ್ಡ ಬಾಟಲಿಯನ್ನೆತ್ತಿ, ಕೈಬೆರಳುಗಳನ್ನು ಸಡಲಿಸಿದ ಪರಿಣಾಮವಾಗಿ ಆ ಬಾಟಲಿಗೆ ಗಗನದಿಂದ ನೆಲಕ್ಕೆ ವರ್ಗವಾಗಿ ಆ ಶಬ್ದವುಂಟಾಗಿತ್ತು, ಎಣಿಕೆಯೂ ಸುಲಭ. ಅರ್ಷಾದ್ ಅಣ್ಣನು ಮುಗುಳ್ನಗುತ್ತ, "ಮಗುವು ಯಾವಾಗಲೂ ಮಗುವೇ! ಬೇಸರಿಸಬೇಡಿರಿ! ಎಂದನು.

ನಾನು ಧೈರ್ಯಗೊಂಡು ಸ್ವಲ್ಪ ನಗುವಿನಿಂದ, "ಇಲ್ಲ" ಎಂದೆ.

"ಮೂರು ರೂಪಾಯಿ ನಾಲ್ಕಾಣೆ—ಸೇಲ್ಸ್ ಟ್ಯಾಕ್ಸ್ ಇಲ್ಲ" ಎಂದು ಪುನಃ ಮುಗುಳ್ನಕ್ಕನು.

ನಾನು ಉಗುಳು ನುಂಗುತ್ತ, ಕಿಸೆಯಿಂದ ಮೂರು ರೂಪಾಯಿ ನಾಲ್ಕಾಣೆಗಳನ್ನೆಳೆದು ಅವನ ಮೇಜಿನ ಮೇಲಿರಿಸಿದೆ!

"ಮಗುವನ್ನು ಕುರ್ಚಿಯ ಮೇಲೆ ಕುಳ್ಳಿರಿಸಿರಿ" ಎನ್ನುತ್ತ, ಕುರ್ಚಿಗೆ ಬೆರಳುತೋರಿಸಿದನು.

ಪಮ್ಮು ಬಾಯ್ತೆರೆದು "ಘೋ" ಅಂದನು. ನಾನು, ಅನೇಕ ನಿಷೇಧಗಳನ್ನು ಕೇಳಿದ ಗಟ್ಟಿ ಜೀವಿ. ಆದರೆ, ಆ ನಿಷೇಧವು ಎಲ್ಲವನ್ನೂ ಮೀರಿಸಿತ್ತು. ತಲೆತಿರುಗಿ, ಹೆಚ್ಚಿಗೇನನ್ನೂ ಆಲೋಚಿಸದೆ, ನಾನೇ ಕುರ್ಚಿಯನ್ನೇರಿ ಕುಳಿತೆ. ಕೆಲಸಿಯು ನನಗೆ ವಸ್ತ್ರ ಸುತ್ತಿದನು. ಮತ್ತೆ ನೆನಪಾಯಿತು. ಒಂದೇ ವಾರದ ಮೊದಲು ಆಯುಷ್ಕರ್ಮ ಮಾಡಿಸಿಕೊಂಡಿದ್ದೆ, "ತಲೆ ಕತ್ತರಿಸಬೇಕಾದುದು ಮಗುವಿಗೆ—ನನಗಲ್ಲ" ಎಂದೆ.

ಆಶ್ಚರ್ಯವೇನೆಂದರೆ, ಪಮ್ಮು ಆಗಲೇ ಆರ್ಭಟೆ ನಿಲ್ಲಿಸಿದ್ದನು.

"ಸರಿ, ಸರಿ,—" ಅರ್ಷಾದ್ ವ್ಯಾಲಕನು ಹೇಳಿದನು. "ಮಕ್ಕಳು ಯಾವಾಗಲೂ ಹಾಗೇ—ಹಟಮಾರಿಗಳು. ಈ ಜಾತಿ (ಪಮ್ಮುವನ್ನು ಉದ್ದೇಶಿಸಿ) ಮೊದಲು ತನ್ನ ಅಪ್ಪನೇ ಕುರ್ಚಿಯಲ್ಲಿ ಕುಳಿತದ್ದನ್ನು ನೋಡಲು ಇಚ್ಛಿಸುತ್ತದೆ. ಆದರಿಂದ ಅವುಗಳಿಗೆ ತುಂಬ ಸಮಾಧಾನವಾಗುತ್ತದೆ. ದೊಡ್ಡವನಾದಾಗ ಇದು (ಪಮ್ಮು) ಏನಾಗಬೇಕೆಂದು ಅಪ್ಪ—ಅಮ್ಮನ ಇಚ್ಛೆ?"

"ಮಂತ್ರಿಯಾಗಬೇಕೆಂದು ಅವರ ಆಸೆ ಅಂತ ಕೇಳಿದ್ದೇನೆ. ಅದು ಸಾಧ್ಯವಾಗುವ ತನಕ ಯಾವುದಾದರೂ ಒಂದು ಪಕ್ಷದ ಧುರೀಣನಾಗ ಬಹುದೆಂದೆಣಿಸಲಾಗಿದೆ" ಎಂದೆ.

"ಖಂಡಿತ, ಇದು ಅಲ್ಲಿಗೇ ತಲಪುವುದು ಖಂಡಿತ!" ಎನ್ನುತ್ತ, ಆ ಮಹಾಶಯನು, ಇನ್ನೊಂದು ವಸ್ತ್ರವನ್ನು ಮೆಲ್ಲಗೆ ತೆಗೆದನು. ಕೂಡಲೇ ಪಮ್ಮು ಗಾಯನಕ್ಕಾರಂಭಿಸಿದನು. ಈ ನಿಷೇಧವನ್ನು ಸಂಗೀತ ನೊಟೇಶನ್ ಪುಸ್ತಕದಲ್ಲಿ ನಿಷಾದವೆಂದು ಗುರುತಿಸುತ್ತಾರೆ ಮಿತ್ರಾ! ಕೆಲಸಿಯು ಕ್ಷಣಾರ್ಧ ದಲ್ಲಿ ಆ ವಸ್ತ್ರವನ್ನು ತೆಗೆದಿರಿಸಿದನು. ಗಾಯನವೂ ನಿಂತಿತು.

ಆ ಮೇಲೆ, ಓರೆಗಣ್ಣಿನಿಂದ ಪಮ್ಮುವನ್ನು ದೃಷ್ಟಿಸುತ್ತ ಕೆಲಸಿಯು, ಆ ಹೊದಿಕೆ ವಸ್ತ್ರಕ್ಕೆ ಕೈಚಾಚಿ, ಮೆಲ್ಲನೆ ಒಂದು ಅಂಗುಲದ ಎಂಟನೇ ಒಂದಂಶ ಎಳೆದನು. ಸೈ! ಪಮ್ಮು ಬಾಯಿಯೂ ಕೂಡಲೇ ತೆರೆದು ಕೊಂಡಿತು. ಕೆಲಸಿಯು ಪುನಃ ವಸ್ತ್ರವನ್ನು ಬಿಟ್ಟುಬಿಟ್ಟನು,—ಪಮ್ಮು ಬಾಯಿ ಮುಚ್ಚಿತು.

"ಮುದ್ದು ಪುಟ್ರಂಗ! ಒಳ್ಳೇ ಚುರುಕು! ಎಲ್ಲಿ ಏನು ಏಕೆ ಹೇಗೆ ನಡೆಯುತ್ತದೆಂದು ಅವನಿಗೆ ಚೆನ್ನಾಗಿ ಗೊತ್ತು. ನೋಡಿ ಸ್ವಾಮಿ, ನನ್ನ ಮಟ್ಟಿಗೆ ಪರವಾ ಇಲ್ಲ—ನಾನು ಯಾವ ತರದ ಎಷ್ಟು ದೊಡ್ಡ ಸ್ವರವನ್ನೂ ಸಹಿಸುವ ತ್ರಾಣಿ ಜೀವ. ಆದರೆ, ನಮ್ಮ ಯಜಮಾನಿಗೆ ಹಾರ್ಟು ಎಂದಿದ್ದಾರೆ—ವಾರಕ್ಕೆರಡು ಬಾರಿ ಡಾಕ್ಟರು ನೋಡುತ್ತಾರೆ. ನಮ್ಮ ಮನೆ ಈ ಸೆಲೂನಿನ ಒಳಗೆ—" ಎನ್ನುತ್ತ ಅಲ್ಲೆ ಕಾಣುವ ಒಂದು ಬಾಗಿಲಿಗೆ ಬೆರಳು ತೋರಿಸಿದನು. ಆ ಮೇಲೆ ಒಂದು ಕುರ್ಚಿಯಲ್ಲಿ ತಾನು ಕುಳಿತು, "ಹಂ!" ಎನ್ನುತ್ತ ಉಸಿರೂದಿದನು.

ಮಿತ್ರಾ, ಕೇಳಿದಿಯಲ್ಲವೆ? ನೀನೇನು ಮಾಡಬಲ್ಲೆ ಹೇಳು. ನನ್ನಿಂದ ವಾಗ್ಝರಿಯೇ ಹರಿಯಿತು: "ನೋಡಯ್ಯಾ, ಅವನ ಅಮ್ಮನು ವಿಶ್ವಾಸದಿಂದ ಈ ಪುಟ್ರಂಗನನ್ನು ಕಳಿಸಿಕೊಟ್ಟಿದ್ದಾಳೆ. ಈ ಎಟಂ ಯುಗದಲ್ಲಿ ನಗದಿ ಹಣ ತೆರುವೆವೆಂದರೂ ಮಕ್ಕಳ ತಲೆ ಕತ್ತರಿಸುವವರಿಲ್ಲವೆಂದರೇನು? ನಾಡದು, ಈ ನಗರದ ಇತಿಹಾಸದಲ್ಲಿ ಇದೇ ಮೊದಲನೇ ಬಾರಿ, ನಾಯಿಗಳ ಒಂದು ಪ್ರದರ್ಶನವಿದೆ. ನಾಳೆ ಬೆಳಗ್ಗಿನೊಳಗೆ ಈ ಪುಟ್ರಂಗನ ತಲೆಯ ಮೇಲಿನ ಬೆಳೆಯು ಕಟಾವಾಗದಿದ್ದರೆ, ಶ್ವಾನ ಪ್ರದರ್ಶನ ಕಾಲದಲ್ಲಿ ಇದನ್ನು

ಗಡಿಬಿಡಿಯಲ್ಲಿ ಚಿಕ್ಕ ಸೈಜಿನ ವಕ್ಕಿನಾಯಿ ಎಂದು ಪರೀಕ್ಷಕರು ತೀರ್ಮಾನಿಸುವ ಭಯವಿದೆ. ಆಚೆ ಕಡೆಯುವನೊಬ್ಬನು, ಶುಕ್ರವಾರ—ಶನಿವಾರ—ರವಿವಾರಗಳಲ್ಲೂ ಸೋಮವಾರ—ಕುಜವಾರ—ಬುಧವಾರಗಳಲ್ಲೂ ಬಾಲ ಹತ್ಯ ಮಾಡುವುದಿಲ್ಲವೆಂದನು. ನೀನಾದರೋ ಅನುಭವಿ ಎಂದು ಕಾಣಿಸುತ್ತಿರುವೆ. ನಿನ್ನ ಕಷ್ಟಗಳು ಇಷ್ಟಿದ್ದರೆ ದಂತವೈದ್ಯರ ಕಷ್ಟಗಳೆಷ್ಟಿರಬೇಡ, ಹೇಳು!" ಎಂದೆ.

"ದಂತವೈದ್ಯರು ಸ್ವಾಮಿ, ತೆರೆದ ಬಾಯಿಯನ್ನು ಮುಚ್ಚದಂತೆ ಚುಚ್ಚಿ ಹಿಡಿದು ಮುಗಿಸುತ್ತಾರೆ."

"ಇರಲಿ. ನಿನ್ನೊಡನೆ ಇನ್ನೊಂದು ಖುರ್ಚಿಯಿಲ್ಲವೆ? ಪಮ್ಮುವನ್ನು ಅದರಲ್ಲಿ ಇರಿಸು. ನಾನು ಇದಿರಲ್ಲಿ ಇದ್ದುಬಿಡುವೆ. ಅವನು ನನ್ನನ್ನು ನೋಡುತ್ತಿರುವಾಗ, ಅವನ ತಲೆ ಮೇಲೆ ಕತ್ತರಿಯಾಡಿಸು—" ಎಂದೆ.

ಗಡಿಯಾರವು ಒಂದು ಬಡೆಯಿತು. ಕೆಲಸಿಯು ಖೂಳ ಪಮ್ಮುವನ್ನು ಹಿಡಿಯ ಹೋದನು. ಪಮ್ಮು, ತೊರವೆಯ ರಾಮಾಯಣದಲ್ಲಿ, ಅಂಜನಾಸೂನುವನ್ನು ನೋಡಿದಾಕ್ಷಣ ಲಂಕಿಣಿಯು "ಕೋಟಿ ಸಿಡಿಲಬ್ಬರಣೆಯುಲಿ ಶತಕೋಟಿ ಕಾಯನ ನುಂಗಲಾಸ್ಯದ ಕೋಟರವನಗಲಿಸಿದಳ....." ಎಂಬಂತೆ ತನ್ನ ಬಾಯಿಯನ್ನು ವಿಶಾಲವಾಗಿ ತೆರೆದು ಕೋಟಿ ಸಿಡಿಲುಗಳ ಆರ್ಭಟಿಕೊಟ್ಟನು. ಕೆಲಸಿಯು, ಅತಿ ಚಳಿಯಾದ ಗಾಳಿ ಬೀಸಿದಾಗ ನಡುಗುವ ರೋಗಿಯಂತೆ ಗಡಗಡನೆ ನಡುಗಿ, ತನ್ನ ಮನೆ ಬಾಗಿಲಿಗೆ ಬೆರಳು ತೋರಿಸಿ, "ಒಳಗೆ ಹೋಗಿ, ಅವಳಿಗೇನಾಯಿತೆಂದು ನೋಡಿ, ಸಮಾಧಾನ ಹೇಳಿ ಬರುತ್ತೇನೆ"ಂದು ಒಳಗೋಡಿದನು. ಅವನು ಮರಳುವಾಗ, ಸ್ನಾನ ಮುಗಿಸಿ, ಹೊಸ ಪೋಷಾಕನ್ನುಟ್ಟು (ಮಸ್ಲಿನ್ 'ಡಗ್ಲ,' ತೆಳ್ಳಗಿನ ಧೋತಿ) ಸುಸಜ್ಜಾಗಿ ಬಂದಿದ್ದನು. ಬಂದವನೇ, ಒಂದು ಕತ್ತರಿಯನ್ನು ತೆಗೆದು, ನನ್ನ ಕೈಯಲ್ಲಿಟ್ಟನು. ಪಮ್ಮು ಶಾಂತನಾದನು.

"ಸ್ವಾಮಿ,"—ಕೆಲಕ್ಷಣಗಳ ಹಿಂದೆ ಆರಂಭವಾಗಿದ್ದ ಕಂಪನವು ಇನ್ನು ಪೂರ್ಣವಾಗಿ ನಿಂತಿರದ ಆ ಕೆಲಸಿ ಹೇಳಿದನು—"ನಾನು ಸರೀ ಒಂದು ಗಂಟೆಗೆ ಬಾಗಿಲು ಮುಚ್ಚುವ ನಿಯಮದ ಮನುಷ್ಯ. ಈಗ ಒಂದು ಕಳೆದುಹೋಗಿದೆ. ನನ್ನ ಯಜಮಾನಿಯನ್ನು ನೆಂಟರೊಬ್ಬರಲ್ಲಿಗೆ ಮದುವೆಯೂಟಕ್ಕೆ ಕರಕೊಂಡು ಹೋಗಬೇಕಾಗಿದೆ."

"ಆದರೆ........"

ಕೆಲಸಿಯು "ಶ್!" ಎನ್ನುತ್ತ ಬಾಯಿಗೆ ಬೆರಳಿಟ್ಟು, ಮನೆಬಾಗಿಲಿಗೆ ಪುನಃ ಬೆರಳು ತೋರಿಸಿದನು. ಮತ್ತು, "ಆ ಕತ್ತರಿ ತೆಗೆದುಕೊಂಡು ಹೋಗಿ ಸ್ವಾಮೀ—ನಾಳೆ ಕೊಟ್ಟರೆ ಪರವಾ ಇಲ್ಲ. ಮನೆಹಿತ್ತಿಲಿನಲ್ಲಿ ಅವನನ್ನು ಕುಳ್ಳಿರಿಸಿ ತಾವೇ ಕತ್ತರಿಸಿರಿ. ಅದೇನೂ ಅಂಥ ಮಹಾ ಕಷ್ಟದ ಕೆಲಸವಲ್ಲ. ಮಕ್ಕಳು ಕೂಡ, ತಮ್ಮ ಮನೆ—ತಮ್ಮಪ್ಪ ಎನ್ನುತ್ತಲೇ ನಿಷೇಧಿಸುವುದಿಲ್ಲ." ಎಂದನು.

ನಾನವನೊಡನೆ ಇನ್ನು ತರ್ಕಿಸಲಾರದೆ, ಕತ್ತರಿಯನ್ನು ಹಿಡಿದುಕೊಂಡು ಪಮ್ಮುನನ್ನೂ ಎಳೆದುಕೊಂಡು ಇಳಿದುಬಂದೆ. ಸುಮಾರು ಎಂಟು ಪೆಪ್ಪರ್ ಮಿಠಾಯಿ ಅಂಗಡಿಗಳನ್ನೂ ಏಳು ಸೆಲೂನುಗಳನ್ನೂ ದಾಟಿ ಹೋಗಿದ್ದೇನೆ, ಅಷ್ಟರೊಳಗೆ ಹಿಂದಿನಿಂದ ಯಾರೋ "ಹೇಯ್!" ಎಂದಾಂತಾಯಿತು. ತಿರುಗಿ ನೋಡಿದರೆ, ಕೆಲಸಿಯು ಓಡಿಬರುತಿದ್ದನು. ನಾಲ್ಕೈದು ಮಂದಿ ಹಾದಿಹೋಕರು ಆ ಉರಿಬಿಸಿಲಿನಲ್ಲಿ ನಿಂತೂ ಸಂತೋಷದ ನಗುವಿನಿಂದ ನನ್ನನ್ನು ನೋಡುತಿದ್ದರು. ಎಡಬಲಗಳಿಗೆ ದೃಷ್ಟಿ ಹರಿಯಿಸಿದೆ—ಅಂಗಡಿಯವರೂ ಗಿರಾಕಿಗಳೂ ನನ್ನನ್ನೇ ನೋಡುತ್ತ ಕಣ್ಣುಗಳನ್ನು ಪಿಳಿಪಿಳಿಯೆಂದು ತಿರುಗಿಸುತಿದ್ದರು. ಏಕೆ? ನೀನೇ ಹೇಳು ಮಿತ್ರಾ, ಏಕೆ ಹಾಗೆ ನೋಡುತಿದ್ದರು?

"ನಿಮ್ಮೊಡನೆ ಇಂಥ ಬಟ್ಟೆಯಿಲ್ಲದಿದ್ದರೆ ನೀವು ಇದನ್ನೇ ಬೇಕಾದರೆ ಒಯ್ಯಿರಿ. ಆದರೆ, ಬಹಿರಂಗ ರಸ್ತೆಯಲ್ಲಿ ಅದನ್ನು ಹಾಗೆ ಸುತ್ತಿಕೊಂಡು ಹೋಗುವುದು ಬೇಡ—ಎಂದು ತಿಳಿಸಲು ಓಡಿ ಬಂದೆ. ತೆಗೆದು, ಮಡಚಿ, ಹಿಡಕೊಂಡು ಹೋಗಿರಿ''—ಎಂದು, ಆ ಕೆಲಸಿ, ಮೆಲ್ಲಗುಸುರಿದನು.

ಮಿತ್ರಾ, ಈಗ ತಿಳಿಯಿತೆ? ನಾನು, ಸೆಲೂನಿನಲ್ಲಿ ಕುಳಿತಿದ್ದಾಗ, ಕಳವಳದ ಗಡಿಬಿಡಿಯಲ್ಲಿ ನನ್ನ ಮೈಗೆ ಸುತ್ತಿದ್ದ ಆ ಹೊಲಸು ಬಟ್ಟೆಯನ್ನು ಪುನಃ ತೆಗೆಯಲು ಮರೆತು, ಹಾಗೇ ಇಳಿದುಕೊಂಡು ಬಂದಿದ್ದೆ! ಈ ವೇಷವನ್ನೂ, ಜತೆಯಲ್ಲಿ ಈ ಚಿಕ್ಕ ಕಾಡುಮನುಷ್ಯನನ್ನೂ ಒಂದು ಕೈಯಲ್ಲಿ ಕತ್ತರಿಯನ್ನೂ ನೋಡಿ ಜನರು ಚಕಿತರಾಗಿ, ಆ ಮೇಲೆ ವಿನೋದಗೊಂಡು ನನ್ನನ್ನೇ ನೋಡುತಿದ್ದರು!

"ಇತ್ತಿಚೇಗೆ ಈ ವೃತ್ತಿಯು ಒಳ್ಳೆಯದೆಂದು ಹಲವರಿಗೆ ಎನಿಸಹತ್ತಿದೆ. ದೋಷವೇನು?"—ಎಂದಾರೋ ಹೇಳಿಸಿದುದೂ ಕೇಳಿಸಿತು. ನಾನು ಆ

ಸೆಲೂನ್ ಹೊದಿಕೆಯನ್ನು ತೆಗೆದು ಸೆಲೂನ್ ಮ್ಯಾಲಕನ ಕೈಗಿತ್ತು, ಕತ್ತರಿಯನ್ನೂ ಕೊಟ್ಟುಬಿಟ್ಟು, ಪದ್ಮಾವನ್ನು ಬಾಳೆದಿಂಡಿನಂತೆ ಎಳೆದೊಯ್ಯುತ್ತ ಶೀತಮ್ಮನ ಜಗಲಿಗೆಸೆದು, ನನ್ನ ಕೋಣೆ ಸೇರಿ, ಬಾಗಿಲಿಕ್ಕಿ ಕಣ್ಣೀರಿಳಿಸಿದೆ. ಈಗ ಕಣ್ಣೀರು ಪೂರ್ಣ ಮುಗಿದುಹೋಗಿದೆ—ಇನ್ನು ಅಳಲಾರೆ. ದಯವಾಡಿ ತಣ್ಣೀರು ಕೊಡು—ಬಾಯಿಪಸೆ ಆರಿ ಹೋಗಿದೆ ....ಮಿತ್ರಾ, ಜಗತ್ತು ಉಳಿಯಬೇಕಾದರೆ ಪದ್ಮಾ ಪೈದಾಸ್ತು ನಿಲ್ಲಬೇಕು ವಿನಾ ಎಟಂ ಅಲ್ಲ."

(ಒಂದು ತಿಂಗಳ ತನಕ ಕೀಣು, ಆ ರಸ್ತೆಯಾಗಿ ಪುನಃ ಹೋಗಲಿಲ್ಲ. ಪದ್ಮಾಳಿನೊಡನೆ ಈಗಲೂ ಮಾತಾಡುತ್ತಿಲ್ಲ. ಕುಟುಂಬ ಯೋಜನೆಯ ಪ್ರಚಾರಕರು ಈ ಹೇಳಿಕೆಯನ್ನು ಉಪಯೋಗಿಸುವುದಾದರೆ ತನ್ನ ಅಡ್ಡಿಯಿಲ್ಲ, 'ಕೊಪಿರೈಟೂ' ಇಲ್ಲ ಎಂದಿದ್ದಾನೆ.)

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1956ನೇ ಸಪ್ಟಂಬರ ತಿಂಗಳ ಮೊದಲನೇ ವಾರದ ವರೆಗೆ 102 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕ ಹೊರಡುತ್ತಲೇ ಇದೆ.

102 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 2176 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ ಒಂದಾಣೆಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ-ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಈ ವರೆಗೆ ಪ್ರಕಟವಾದ ಪುಸ್ತಕಗಳ ಹೆಸರುಗಳನ್ನು ಈ ಪುಸ್ತಕದ ಹೊದಿಕೆಯ ಎರಡನೇ ಪುಟದಲ್ಲಿ ನೋಡಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

Edited, Printed & Published by K. V. Shenoy
at The Prabhat Printers, Ltd., Mangalore.